ಗಂಜಾಂ ನಾಗರಾಜ್, ಮೈಸೂರು
ಹನುಮಂತನಿಗೆ ಬಾಲ ಇಲ್ಲದಿದ್ದರೆ ರಾವಣ ಏನು ಮಾಡುತ್ತಿದ್ದ?



'ಕೈಕಾಲುಗಳನ್ನು ಸುಡಿ' ಎನ್ನುತ್ತಿದ್ದ. ಹನುಮ ನಾಲ್ಕನ್ನೂ ಬೆಳೆಸಿಕೊಂಡು ಮತ್ತಷ್ಟು ಬೇಗ ಲಂಕೆ ಸುಡುತ್ತಿದ್ದ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಇಂದಿನ ವಿದ್ಯಾರ್ಥಿಗಳಲ್ಲಿ ಶ್ರದ್ಧೆ, ವಿನಯ, ಪ್ರಾಮಾಣಿಕತೆ, ಕೃತಜ್ಞತೆ ಮಾಯವಾಗಲು ಯಾರು ಕಾರಣ?
'ನನ್ನಗೂನ ದಂಡ್ಸಕ್ಕೀವ್ಯಾರು!' ಎನ್ನುವ ಉದ್ಧಟ ಪೋಷಕರು.

ಬಿ. ಬಸವರಾಜ್, ಹರಿಹರ
ಕಾಲ ಎಲ್ಲವನ್ನೂ ಮರೆಸುತ್ತದೆ. ಸಾಲ?
ಕಾಲಕಾಲಕ್ಕೆ ನೆನಪಿಸುತ್ತದೆ.

ಎಂ.ಸಿ. ಧನ್ಯತಾ, ಬೆಂಗಳೂರು
ವಯಸ್ಸಾದ ದಂಪತಿಗಳಲ್ಲೇ ಅನ್ಯೋನ್ಯತೆ ಹೆಚ್ಚಾಗಿರಲು ಏನು ಕಾರಣ?



ಕೂಗಾಡಿದರೆ ಏದುಸಿರು ಬರುತ್ತದಲ್ಲ!

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಜಾತ್ಯತೀತ ರಾಷ್ಟ್ರದಲ್ಲಿ ಜಾತಿ ಗಣತಿ ಅವಶ್ಯಕವೆ?
ಊಹೂಂ. ಆದರೆ ಭಾರತ ಜಾತ್ಯತೀತವಲ್ಲ; ಜಾತಿರೋಗ ಪೀಡಿತ ದೇಶ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ರಾಜಕೀಯ ಪಕ್ಷ ಹೆಮ್ಮರವಾಗಬೇಕಾದರೆ?
ಪಕ್ಷದಲ್ಲಿ ಕೊಂಬೆ ಕಡಿಯುವ, ಹಣ್ಣು ಕದಿಯುವ ಮಾಲಿ ಇರಬಾರದು.

ಬಿ. ಚಂದ್ರೇಗೌಡ, ಬೆಂಗಳೂರು
ಲೋಕನಿಂದಿತರು ಲೋಕವಂದಿತರಾಗುವ ಬಗೆ ಹೇಗೆ?
ತಮ್ಮದೇ ಚಾನಲ್, ಪೇಪರ್, ಚೇಲಾಗಳನ್ನು ಹೊಂದಿದರಾಯ್ತು.

ಎ.ಪಿ. ಲಕ್ಷ್ಮಿ, ನರಗುಂದ
ಮದುವೆ ಮನೆಯಲ್ಲಿ ಎಲ್ಲರೂ ರೇಷ್ಮೆಸೀರೆಯನ್ನೇಕೆ ಉಡುತ್ತಾರೆ?
ಹೊಲಿಸಿಕೊಂಡ ದುಬಾರಿ ಡಿಸೈನರ್ ಬ್ಲೌಸನ್ನು ಚೂಡಿದಾರದ ಮೇಲೆ ಧರಿಸಲಾಗದಲ್ಲ.

ಜೆ. ಪ್ರದೀಪಕುಮಾರ್
ಅಪ್ರಿಯವಾದ ಸತ್ಯವನ್ನು ಒಪ್ಪಿಕೊಳ್ಳುವುದು ಹೇಗೆ?
ಬಿಟ್ಟಿಭಾಗ್ಯಗಳು ಕೇಡೆಂದು ತಿಳಿದೂ ಅಪ್ಪಿಕೊಳ್ಳುವಂತೆಯೇ.

ಪಿ.ಜೆ. ರಾಘವೇಂದ್ರ, ಮೈಸೂರು
ಅಂದು ಕುಟುಂಬ ರಾಜಕಾರಣ. ಇಂದು ಕುಟುಂಬ ಅಪರಾಧೀಕರಣ. ಮುಂದೆ?
ಕುಟುಂಬ ಅಧಿಕರಣ; ಅಪರಾಧ ಸಕ್ರಮಕರಣ.

ಕೆ.ವಿ. ಶಿವಕುಮಾರ್, ಮೈಸೂರು
ಈಗ ಹುಟ್ಟುಹಬ್ಬವನ್ನು ಬೀದಿಬೀದಿಗಳಲ್ಲಿ ಆಚರಿಸಿಕೊಳ್ಳುತ್ತಿದ್ದಾರಲ್ಲ?
ಗೂಳಿ, ಕೋಣ, ಬಸವ ಮುಂತಾದವುಗಳ ಯಾವುದೇ ಆಚರಣೆ ಬಯಲಿನಲ್ಲೇ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯನಿಗೆ ಮರೆವು ವರವೋ, ಶಾಪವೋ?
ಅದು ಅವನು ಸಾಲ ಪಡೆದವನೋ, ಕೊಟ್ಟವನೋ ಎನ್ನುವುದನ್ನು ಅವಲಂಬಿಸುತ್ತದೆ.

ಅಮರಯ್ಯಾ ಪತ್ರಿಮಠ, ಸುರಪುರ
ಸಿರಿಯು ಬಂದೊಡೆ...?
ಜಿಎಸ್‌ಟಿಯೂ ವಕ್ಕರಿಸುವುದು.

ಎನ್. ಗೋಪಾಲರಾವ್, ಬೆಂಗಳೂರು
ಲಕ್ಷ್ಮಿ–ಸರಸ್ವತಿಯರಿಗೆ 4 ಕೈಗಳು. ಗಾಯತ್ರಿಗೇಕೆ 8 ಕೈಗಳು?
4 ವೇದಗಳನ್ನಿತ್ತಳಲ್ಲ, ಆ ಪುಸ್ತಕಗಳನ್ನೆತ್ತಲು ತಲಾ ಎರಡು ಕೈ ಬೇಕಾಯಿತಂತೆ.

## ಬಹುಮಾನಿತ ಪ್ರಶ್ನೆ

ಕೆ.ವಿ. ಮಂಜುನಾಥ್, ಕೆ.ಟಿ.ಹಳ್ಳಿ
ಪೊಲೀಸ್ ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸಿದರೆ ದಂಡ ಕಟ್ಟುವಂತಿಲ್ಲವೆ ಗುರುವೆ?
ಉಂಟೇ! ನಮ್ಮಲ್ಲಿ ಭಂಡರಿಗೆ ದಂಡದ ಅಂಕೆಯಿಲ್ಲ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ಇಲ್ಲಿ ಉಗುಳಬಾರದು, ಹೇಸಿಗೆ ಮಾಡಬಾರದು ಎಂಬ ಬೋರ್ಡಿನ ಮೇಲೆ ಮಾಡುವವರಿಗೆ ಏನೆನ್ನಬೇಕು?
ಅನ್ನುವುದೇನು ಬೇಡ; ಅವರನ್ನು ಅದರ ಮೇಲೆ ಕೂಡಿಸಿಬಿಡಿ ಸಾಕು.

ರವಿಕಾಂತ ಎಂ.ಕೆ. ತುಮಕೂರು
ದಿಢೀರ್ ಇಡ್ಲಿ, ದೋಸೆಯಂತೆ ರಾಜಕಾರಣಿಗಳದು ದಿಢೀರ್ ಸುದ್ದಿಗೋಷ್ಠಿ ಏಕೆ?
ಮರುದಿನಕ್ಕೆ ವಿಷಯ ಹಳಸಾಗಿರುತ್ತಂತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಮನೆ ಕಟ್ಟಲು ಹಣ ಬೇಕು. ಮನ ಕಟ್ಟಲು?



ಅಂತಃಕರಣ.

ಮಹಾವೀರ ಕಾಸರ, ಶಿವಮೊಗ್ಗ
ಗಣಿತದ ಮೇಷ್ಟ್ರು ರಾಜಕೀಯಕ್ಕೆ ಬಂದರೆ ಹೇಗಿರುತ್ತೆ?
ಅವನ ಅಲ್ಲಿನವರೆಗಿನ ಸಂಕಲನ ವ್ಯವಕಲನವಾಗುತ್ತೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಆಸೆಗೂ, ಅಪೇಕ್ಷೆಗೂ ಏನು ವ್ಯತ್ಯಾಸ?
ಸುಂದರಿ ಬೇಕೆಂಬುದು ಆಸೆ; ಅವಳು ನಿಮ್ಮನ್ನು ಪ್ರೀತಿಸಲೂಬೇಕೆಂಬುದು ಅಪೇಕ್ಷೆ.

■ ರಾಮ್